# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 710**

**ಮಾನ್ಯ ಸದಸ್ಯರ ಹೆಸರು : ಶ್ರೀ ಜಿ. ರಘು ಆಚಾರ್**

**ಉತ್ತರಿಸಬೇಕಾದ ದಿನಾಂಕ : 14.12.2020**

**ಉತ್ತರಿಸಬೇಕಾದ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು**

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದ ಸರ್ಕಾರವು ಖಾಸಗಿ ವೈದ್ಯಕೀಯ ಸಂಸ್ಥೆಗಳ ನಿರ್ವಹಣಾ ಕಾಯ್ದೆಯನ್ನು ಯಾವ ವರ್ಷ ಜಾರಿಗೆ ತಂದಿದೆ; (ಮಾಹಿತಿ ಒದಗಿಸುವುದು) | ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ 2007ರನ್ನು ದಿನಾಂಕ:13.08.2007 ರಂದು ರಾಜ್ಯಪತ್ರದಲ್ಲಿ ಅಧಿಕೃತವಾಗಿ ಪ್ರಕಟಿಸಲಾಗಿದ್ದು, ದಿನಾಂಕ:10.11.2009, ರಿಂದ ಜಾರಿಗೆ ತರಲಾಗಿದೆ. |
| ಆ) | ಸದರಿ ಕಾಯ್ದೆಯು ಜಾರಿಗೆ ಬಂದ ನಂತರ ಸಮಗ್ರ ತಿದ್ದುಪಡಿಗೆ ಒಳಪಡಿಸಿದ್ದು ಯಾವಾಗ; ಯಾವ ವರ್ಷದಿಂದ ತಿದ್ದುಪಡಿ ಮಾಡಲಾಗಿದೆ; (ಮಾಹಿತಿ ಒದಗಿಸುವುದು) | ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ 2017ರನ್ನು ದಿನಾಂಕ:06.01.2018ರಂದು ರಾಜ್ಯಪತ್ರದಲ್ಲಿ ಹೊರಡಿಸಲಾಗಿದೆ. ಸದರಿ ಅಧಿನಿಯಮವನ್ನು ದಿನಾಂಕ:04.04.2019 ರಿಂದ ಜಾರಿಗೆ ತರಲಾಗಿದೆ. |
| ಇ) | ತಿದ್ದುಪಡಿ ವಿಧೇಯಕವಾಗಿರುವ ಮೇಲೆ ಶಾಸನ ಅನುಷ್ಠಾನಕ್ಕೆ ಸಂಬಂಧಿಸಿದ ಯಾವುದಾದರೂ ನಿಯಮವನ್ನು ರೂಪಿಸಲಾಗಿದೆಯೇ? (ಮಾಹಿತಿ ಒದಗಿಸುವುದು) | ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ನಿಯಮಗಳ 2018ರನ್ನು ದಿನಾಂಕ:23.03.2018ರಂದು ರಾಜ್ಯಪತ್ರದಲ್ಲಿ ಹೊರಡಿಸಲಾಗಿದೆ. ಸದರಿ ಅಧಿನಿಯಮವನ್ನು ದಿನಾಂಕ:22.08.2019 ರಿಂದ ಜಾರಿಗೆ ತರಲಾಗಿದೆ. |

**ಸಂಖ್ಯೆ: ಆಕುಕ 91 ಎಸ್.ಟಿ.ಕ್ಯೂ 2020**

**(ಡಾ|| ಕೆ.ಸುಧಾಕರ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು